**ಎಫ್ ಡಿ ಪಿ ನಂ 11/2018**

**ಆರ್. ಡಬ್ಲ್ಯೂ ಃ 1**

**ದಿಃ 08.07.2025 ರಂದು ಮದ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಆರ್ ಕೆ ವಕೀಲರಿಂದ**

ನಿಪಿ 46 ರಲ್ಲಿ ತೋರಿಸಿರುವ ಪೂರ್ತಿ ವಿಸ್ತೀರ್ಣ ದಾವಾ ಸ್ವತ್ತು ಇರುವುದಿಲ್ಲ. ಅದಕ್ಕೆ ಕಾರಣ ಕೆಲ ಜಾಗ ಭೂ ಸ್ವಾಧೀನವಾಗಿರುತ್ತದೆ. ಸದರಿ ಸ್ವತ್ತಿನಲ್ಲಿ 4 ಗುಂಟೆ ಭೂ ಸ್ವಾಧೀನವಾಗಿರುತ್ತದೆ. ಸದರಿ ಸ್ವತ್ತು ಪೂರ್ವ ಪಶ್ಚಿಮ ಎಷ್ಟು ಇರುತ್ತದೆ ಮತ್ತು ಉತ್ತರ ದಕ್ಷಿಣ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ ಪಿ 46 ರ ಪ್ರಕಾರ ಯಾವುದೇ ಪರಭಾರೆ, ಮಾರಾಟ , ದಾನಪತ್ರ ಆಗಿರುವುದಿಲ್ಲ. ಈ ಸ್ವತ್ತಿನಲ್ಲಿ ಪೂರ್ವಕ್ಕೆ ಟೆಲಿಫೋನ್ ಎಕ್ಸಚೇಂಜ್ ರವರಿಗೆ ಬಾಡಿಗೆಗೆ ನೀಡಿರುತ್ತೇವೆ ಎಂದರೆ ಸರಿ. ಬಾಡಿಗೆಗೆ ಕೊಟ್ಟಿರುವ ಜಾಗ ಎಷ್ಟು ಚದರ ಅಡಿ ಇರುತ್ತದೆ ಎಂದರೆ ಗೊತ್ತಿಲ್ಲ. ಪೂರ್ವಕ್ಕೆ ಟೆಲಿಫೋನ್ ಎಕ್ಸಚೇಂಜ್ ಗೆ ಬಾಡಿಗೆಗೆ ನೀಡಿದ ಕಟ್ಟಡ ಭೂ ಸ್ವಾಧೀನದಲ್ಲಿ ಅರ್ಧ ಹೋಗಿದ್ದು, ಇನ್ನು ಅರ್ಧ ಕಟ್ಟಡ ಇರುತ್ತದೆ.

ಸದರಿ ಕಟ್ಟಡವನ್ನು ಅಂಗಡಿಗಳಾಗಿ ಪರಿವರ್ತನೆ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕಟ್ಟಡದಲ್ಲಿ ಒಂದು ಅಂಗಡಿಗೆ ಬಾಡಿಗೆ ನೀಡಿದ್ದು, ಸದರಿ ಜಾಗ 10*16 ಅಡಿಗಳು ಇರುತ್ತದೆ. ಸದರಿ ಜಾಗಕ್ಕೆ ರೂ. 50 ಸಾವಿರ ಅಡ್ವಾನ್ಸ ಮತ್ತು ಒಂದೂವರೆ ಸಾವಿರ ಬಾಡಿಗೆ ನೀಡುತ್ತಿದ್ದಾರೆ. ಸದರಿ ಬಾಡಿಗೆ ಮತ್ತು ಅಡ್ವಾನ್ಸ ಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳಿಗೆ ಸಂಬಂದಿಸಿದಂತೆ ಎಷ್ಟು ಬಾಡಿಗೆ ಬರುತ್ತಿದೆ ಮತ್ತು ಅಡ್ವನ್ಸ ಪಡೆದಿರುತ್ತೇನೆ ಎಂದು ಯಾವ ದಾಖಲಾತಿಗಳನ್ನು ಕೊಟ್ಟಿಲ್ಲ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಕೊಡಲು ತಯಾರಿಲ್ಲ ಎಂದರೆ ಸಾಕ್ಷಿ ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಅಡ್ವಾನ್ಸ ಪಡೆದಿರುವುದಕ್ಕೆ ಮತ್ತು ಬಾಡಿಗೆ ಬರುತ್ತಿರುವುದಕ್ಕೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ. ನನಗೆ ಈಗ ಸದರಿ ಕಟ್ಟಡದಿಂದ ಐದೂವರೆ ಲಕ್ಷ ಅಡ್ವನ್ಸ ಕೊಟ್ಟಿದ್ದು ಬಾಡಿಗೆ ರೂ. 10 ಸಾವಿರ ಬರುತ್ತಿದೆ. ಸದರಿ ಅಡ್ವನ್ಸ ಮತ್ತು ಬಾಡಿಗೆಯನ್ನು ಅರ್ಜಿದಾರರಿಗೆ ನೀಡದೇ ನಾನೇ ಉಪಯೋಗಿಸಿಕೊಂಡಿರುತ್ತೇನೆ ಎಂದರೆ ಸರಿ.

ಯಾವ ಅಂಗಡಿಗೆ ಎಷ್ಟು ಕಂದಾಯ ಕಟ್ಟುತ್ತಿದ್ದೇನೆ ಎಂದರೆ ಸಾಕ್ಷಿ ನಾನು ಒಟ್ಟು ಎಲ್ಲ ಕಟ್ಟಡಕ್ಕೆ ಈಗ ರೂ.5600/- ಗಳನ್ನು ಕಟ್ಟಿರುತ್ತೇನೆ. ನನಗೆ ಬರುತ್ತಿರುವ ಬಾಡಿಗೆ ಹಣದಲ್ಲಿ ಎಲ್ಲ ಕಂದಾಯವನ್ನು ಕಟ್ಟಿರುತ್ತೇನೆ ಎಂದರೆ ಸರಿ. ನಿಪಿ 48 ರಿಂದ ನಿಪಿ 50 ರಲ್ಲಿ ತೋರಿಸಲಾಗಿರುವ

ರಶೀದಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ನನ್ನ ತಂದೆಯ ಹೆಸರಿನಲ್ಲಿ ಆಗಿರುವ ಖಾತೆಗಳು ನನ್ನ ತಾತನ ಮರಣದ ನಂತರ ಪೌತಿ ತಃಖ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಆಗಿರುವ ಖಾತೆಯು ನನ್ನ ತಂದೆ ತೀರಿಕೊಂಡ ನಂತರ ಆಗಿರುವ ಖಾತೆ ಎಂದರೆ ಸರಿ. ನಾನು ವಾಸವಿರುವ ಮನೆಯ ಕಂದಾಯ ಕಟ್ಟುತ್ತೇನೆ. ಎಲ್ಲ ಕಂದಾಯಗಳು ಒಟ್ಟಿಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾಸ ಇರಲು ಕಂದಾಯವನ್ನು ಕಟ್ಟಿರುತ್ತೇನೆ ಎಂದರೆ ಸರಿ. ಬಾಡಿಗೆ ಮತ್ತು ಅಡ್ವನ್ಸ ನಾನು ಹೆಚ್ಚಾಗಿ ಪಡೆದಿರುತ್ತೇನೆ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಈ ದಾವೆ ಇತ್ಯರ್ಥವಾಗಿರುತ್ತದೆ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಾನು 1/3 ಭಾಗ ವನ್ನು ಅರ್ಜಿದಾರರಿಗೆ ನೀಡಬೇಕೆಂದರೆ ಸರಿ. ನಾನು ಅರ್ಜಿದಾರರಿಗೆ ಉತ್ಪತ್ತಿಯಲ್ಲಿ 1/3 ಭಾಗವನ್ನು ನೀಡಬೇಕೆಂದರೆ ಸಾಕ್ಷಿ ನ್ಯಾಯಾಲಯ ತೀರ್ಮಾನ ಮಾಡಬೇಕೆಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಸಾಲವನ್ನು ಕೊಡಬೇಕೆಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಅವರಿಗೆ ಬರಬೇಕಾದ ಭಾಗವನ್ನು ಕೊಡುತ್ತೀನಾ ಎಂದರೆ ಸಾಕ್ಷಿ ನ್ಯಾಯಾಲಯ ಏನು ತೀರ್ಮಾನ ಮಾಡುತ್ತಾರೋ ಅದರ ಪ್ರಕಾರ ನಡೆದುಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ನಾನು ದುರುದ್ದೇಶದಿಂದ ಈ ಅರ್ಜಿಯನ್ನು ತಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸ್ವಾಧೀನ ಕೊಡುವವರೆಗೂ ದಾವಾ ಸ್ವತ್ತುಗಳಲ್ಲಿ ಪಡೆದಿರುವ ಹಣದ ಲೆಕ್ಕ ಕೊಡಬೇಕೆಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಪ್ರತ್ಯೇಕವಾಗಿ ಅಳತೆಯಂತೆ ಸ್ವಾಧೀನಕೊಡಬೇಕೆಂದರೆ ನ್ಯಾಯಾಲಯ ಹೇಳಿದಂತೆ ನಡೆದುಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸ್ವಾಧೀನ ನೀಡಿದ ನಂತರ ಈ ವಿಚಾರಗಳು ಬರಬೇಕೆಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**